ಬೇಕು. ಇಲ್ಲವಾದರೆ ಅದರ ಮೇಲೆ influence ಮಾಡುತ್ತಿದ್ದೀರೆಂದು ನನಗನಿಸುತ್ತಿದೆ.

ಶ್ರೀ ಕೆ.ಜೆ.ಜಾರ್ಜ್ (ಗೃಹ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರು. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು, ಕಾನೂನು ವಿಚಾರದ ಬಗ್ಗೆ ಅವರಿಗೆ ನನಗಿಂತ ಚೆನ್ನಾಗಿ ತಿಳುವಳಿಕೆಯಿದೆ. ಮೊದಲನೆ ಯದಾಗಿ ಈ ವಿಚಾರದಲ್ಲಿ ಸರ್ಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡಲಿಲ್ಲ ಅದಕ್ಕೆ ಉದಾಹರಣೆಯೆಂದರೆ complaint register ಮಾಡಿದ್ದೇವೆ. Complaint ವಿಚಾರದಲ್ಲಿ FIR ತೆಗೆದುಕೊಂಡಿದ್ದೇವೆ. ಈಗಾಗಲೇ CCTV ಯಲ್ಲಿ ಬಂದ footings, doctor certificate ಇದನ್ನೆಲ್ಲಾ ನಾವು ನೋಡು ವುದಕ್ಕಾಗುವುದ್ದಲ್ಲ. ಈಗಾಗಲೇ investigation officer ಅನ್ನು ನೇಮಕ ಮಾಡ ಲಾಗಿದ್ದು ಅವರು ಯಾವ ರೀತಿ ತನಿಖೆ ಮಾಡಬೇಕೆಂದು ನಾನು ಹೇಳುವುದಕ್ಕಾಗುವುದಿಲ್ಲ. ನಾವು Investigation Officer ಗೆ ಮತ್ತು ಪೊಲೀಸ್ ನವರಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಅವರು ನಿಷ್ಪಕ್ಷಪಾತ ವಾಗಿ ವಿಚಾರ ಮಾಡುತ್ತಾರೆ. ಯಾರೇ ತಪ್ಪು ಮಾಡಿದ್ದರೂ ಕೂಡ ಅವರಿಗೆ ಶಿಕ್ಷೆ ಕೊಡುವ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಉತ್ತರ ನಮಗೆ ಸಮಾಧಾನ ತಂದಿಲ್ಲ. ಇದನ್ನು ನಾವು protest ಮಾಡುತ್ತೇವೆ. ಸರ್ಕಾರ ಆರೋಪಿಗಳನ್ನು ರಕ್ಷಣೆ ಮಾಡುತ್ತಿರುವ ಕಾರಣ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಅಧ್ಯಕ್ಷರು: ದಯವಿಟ್ಟು ಬೇಡ.

ಶ್ರೀ ಸಿ.ಟಿ.ರವಿ: CCTV records ವಾಸ್ತವಿಕತೆಯೇನು ಎಂಬುವುದನ್ನು ತರಿಸಿ ತೋರಿಸಿ. ರೆಕಾರ್ಡ್ಸ್ ತರಿಸಿ ತೋರಿಸುವುದಕ್ಕೆ ಅವಕಾಶವಿದೆ.

(ಈ ಹಂತಸಲ್ಲಿ ಬಿ.ಜೆ.ಪಿ ಶಾಸಕರು ಸದನದಿಂದ ಹೊರನಡೆದರು)